**ಓ.ಎಸ್. ನಂಃ 410/2023**

**ಪಿ.ಡಬ್ಲ್ಯೂಃ 3**

**ದಿನಾಂಕ 03.07.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಟಿ.ಜಿ ವಕೀಲರಿಂದಃ**

1. ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಲು ವಾದಿ ನನ್ನಲ್ಲಿ ಕೇಳಿಕೊಂಡಿರುತ್ತಾರೆ. ನಾನು ನಿಪಿ-1 ರ ದಾಖಲೆಗೆ ಸಹಿ ಮಾಡಲು ಹೋಗಿದ್ದಾಗ ಮಾತ್ರ ನನಗೆ ವಾದಿಯ ಪರಿಚಯವಾಗಿದ್ದು, ಆದರೆ ಪ್ರತಿವಾದಿಯ ಗೆಳೆಯನಾದ ಕಾರ್ತಿಕ್ ರವರು ನನ್ನ ಗೆಳೆಯನಾಗಿರುತ್ತಾರೆ. ಕಾರ್ತಿಕ್ ರವರು ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದು, ಅವರು ಯಾವ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕಾರ್ತಿಕ್ ರವರು ಬಹುಶಃ ಪದವಿ ಶಿಕ್ಷಣವನ್ನು ಮಾಡಿರುತ್ತಾರೆ. ಸುಮಾರು 6 ವರ್ಷಗಳಿಂದ ನನಗೆ ಕಾರ್ತಿಕ್ ರವರ ಪರಿಚಯವಿದೆ.

2. ನಿಪಿ-1 ರ ಛಾಪಾ ಕಾಗದವನ್ನು ಪ್ರತಿವಾದಿಯೇ ಸ್ವತಃ ಮೈಸೂರಿನಿಂದ ಖರೀದಿಸಿರುತ್ತಾರೆ. ನಿಪಿ-1 ರ ಛಾಪಾ ಕಾಗದವನ್ನು ಪ್ರತಿವಾದಿ ತಂದಾಗ ನಾನು ಮತ್ತು ಕಾರ್ತಿಕ್ ಬಸ್ ಡಿಪೋದ ಬಳಿ ಚಹಾ ಕುಡಿಯುತ್ತಿದ್ದೆವು. ನನ್ನನ್ನು ಮತ್ತು ಕಾರ್ತಿಕ್ ನನ್ನು ಹೊರತುಪಡಿಸಿ ಅಲ್ಲಿ ನಮ್ಮ ಜೊತೆ ಬೇರೆ ಯಾರೂ ಸಹ ಇರಲಿಲ್ಲ. ಕಾರ್ತಿಕ್ ರವರ ಮೊಬೈಲ್ ಸಂಖ್ಯೆ ನನ್ನ ಮೊಬೈಲ್ ನಲ್ಲಿ Save ಆಗಿದ್ದು, ಅವರ ಮೊಬೈಲ್ ಸಂಖ್ಯೆ ನನಗೆ ಬಾಯಿಪಾಠ ಬರುವುದಿಲ್ಲ. ಕಾರ್ತಿಕ್ ನನ್ನ ಗೆಳೆಯನಾಗಿರುವುದರಿಂದ ವಾದಿಯ ಪರ ನಾನು ನಿಪಿ-1 ರ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನಿಪಿ-1 ರ ದಾಖಲೆಗೆ ಪ್ರತಿವಾದಿ ಪರ ಸಹಿ ಮಾಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ.

3. ಪ್ರತಿವಾದಿಯ ಸ್ವಂತ ಊರು ಅಕ್ಕಿಹೆಬ್ಬಾಳು ಹೋಬಳಿಯ ಸೋಮನಾಥಪುರವಾಗಿರುತ್ತದೆ. ನನಗೆ ವಾದಿಯ ಅಳಿಯನಾದ ದರ್ಶನ್ ರವರ ಪರಿಚಯವಿಲ್ಲ. ನನಗೆ ದೊಡ್ಡೇಗೌಡನ ಕೊಪ್ಪಲು ಗ್ರಾಮದ ಬಗ್ಗೆ ಮಾಹಿತಿ ಇಲ್ಲ. ನಿಪಿ-1 ರ ಛಾಪಾ ಕಾಗದವನ್ನು ಪ್ರತಿವಾದಿಯು ಸಂಜೆ ಅಂದಾಜು 5.45 ಗಂಟೆಗೆ

ಖರೀದಿಸಿರುತ್ತಾರೆ. ಮೈಸೂರಿನಲ್ಲಿ ಹಲವಾರು ಪತ್ರ ಬರಹಗಾರರು ಇದ್ದಾರೆ ಎಂದರೆ ಸರಿ. ಮೈಸೂರಿನಲ್ಲಿ ಪ್ರೊನೋಟ್ ಅನ್ನು ತಯಾರಿಸದೇ ಮಿರ್ಲೆಯಲ್ಲಿ ನೀವು ಪ್ರೊನೋಟ್ ಅನ್ನು ಯಾಕೆ ತಯಾರಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪ್ರೊನೋಟ್ ಅನ್ನು ಕೆ.ಆರ್ ನಗರದಲ್ಲಿ ತಯಾರಿಸೋಣ ಎಂದು ಪ್ರತಿವಾದಿ ನಮ್ಮನ್ನು ಕೆ.ಆರ್ ನಗರಕ್ಕೆ ಕರೆದುಕೊಂಡು ಬಂದಿದ್ದು, ಕೆ.ಆರ್ ನಗರದಲ್ಲಿ ಉಪನೋಂದಣಾಧಿಕಾರಿಯವರ ಕಛೇರಿ ಮುಚ್ಚಿದ್ದ ಕಾರಣ ಪ್ರೊನೋಟ್ ಅನ್ನು ತಯಾರಿಸಲು ಪ್ರತಿವಾದಿಯು ನಮ್ಮನ್ನು ಮಿರ್ಲೆಗೆ ಕರೆದುಕೊಂಡು ಹೋಗಿರುತ್ತಾರೆ. ಮಿರ್ಲೆಯ ಉಪನೋಂದಣಾಧಿಕಾರಿಯವರ ಕಛೇರಿಯ ಪಕ್ಕದಲ್ಲಿದ್ದ ವಸಂತ ಕುಮಾರ ಎನ್ನುವ ಪತ್ರ ಬರಹಗಾರರ ಕಛೇರಿಯಲ್ಲಿ ನಿಪಿ-1 ರ ಪ್ರೊನೋಟ್ ಅನ್ನು ತಯಾರಿಸಿರುತ್ತಾರೆ. ನಿಪಿ-1 ರ ದಾಖಲೆಯಲ್ಲಿ ವಸಂತ ಕುಮಾರ ರವರ ವಿಳಾಸ ಸಾಲಿಗ್ರಾಮ ಎಂದು ನಮೂದಾಗಿರುತ್ತದೆ ಎಂದರೆ ಸರಿ.

4. ಈ ದಾವೆಯನ್ನು ಹೂಡಿದಾಗ ನಿಪಿ-1 ರ ದಾಖಲೆಯನ್ನು ತಯಾರಿಸಿ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ-1 ರ ದಾಖಲೆಯನ್ನು ಈ ದಾವ ಹೂಡುವ ಪೂರ್ವದಲ್ಲಿಯೇ ತಯಾರಿಸಿ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಪ್ರತಿವಾದಿಯು ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿರದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ವಾದಿ, ಕಾರ್ತಿಕ್ ಹಾಗೂ ಪತ್ರ ಬರಹಗಾರರು ಶಾಮೀಲಾಗಿ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುಳಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**